## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 739 |
| ಸದಸ್ಯರ ಹೆಸರು | : | ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸಬೇಕಾದ ದಿನಾಂಕ | : | 22.07.2024 |
| ಉತ್ತರಿಸುವ ಸಚಿವರು | : | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಪ್ರಾಥಮಿಕ ಶಾಲೆಗಳನ್ನು ಇನ್ನು ಸದೃಢವಾಗಿ ಮುಂದುವರಿಸಲು ಸರ್ಕಾರ ಕೈಗೊಂಡ ಕ್ರಮಗಳಾವುವು ಹಾಗೂ ನೀಡಿರುವ ಮೂಲಭೂತ ಸೌಲಭ್ಯಗಳಾವುವು; | **ಪ್ರಾಥಮಿಕ ಶಾಲೆಗಳನ್ನು ಇನ್ನು ಸದೃಢವಾಗಿ ಮುಂದುವರಿಸಲು ಈ ಕೆಳಕಂಡಂತೆ ಕ್ರಮವಹಿಸಿದೆ.**<br><br>ಸರ್ಕಾರಿ ಶಾಲೆಗಳ ಬಲವರ್ಧನೆಗಾಗಿ 2024-25ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಹಾಲಿ ನಡೆಯುತ್ತಿರುವ ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳ ಪೈಕಿ 55 ಸರ್ಕಾರಿ ಕಿರಿಯ ಪ್ರಾಥಮಿಕ ಶಾಲೆಗಳನ್ನು ಹಿರಿಯ ಪ್ರಾಥಮಿಕ ಶಾಲೆಗಳನ್ನಾಗಿ ಉನ್ನತೀಕರಿಸಲಾಗಿರುತ್ತದೆ. ಹಾಗೂ 1 ರಿಂದ 7ನೇ ತರಗತಿ ನಡೆಯುತ್ತಿರುವ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳ ಪೈಕಿ 41 ಶಾಲೆಗಳನ್ನು 8ನೇ ತರಗತಿಗೆ ಉನ್ನತೀಕರಿಸಲಾಗಿರುತ್ತದೆ. ಹಾಗೂ 1419 ಶಾಲೆಗಳಲ್ಲಿ ಹಾಲಿ ನಡೆಯುತ್ತಿರುವ ಕನ್ನಡ/ಇತರೆ ಮಾಧ್ಯಮದ ಜೊತೆಗೆ ಆಂಗ್ಲ ಮಾಧ್ಯಮ (ದ್ವಿ-ಭಾಷಾ) ಶಾಲೆಗಳನ್ನು ಪ್ರಾರಂಭಿಸಲು ಕ್ರಮಕೈಗೊಳ್ಳಲಾಗುತ್ತದೆ.<br><br>**ರಾಜ್ಯದ ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳಲ್ಲಿ ಅಗತ್ಯ ಕೊಠಡಿ, ಶೌಚಾಲಯ, ಕುಡಿಯುವ ನೀರು ಹಾಗೂ ದುರಸ್ಥಿ ಸೇರಿದಂತೆ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರವು ಈ ಕೆಳಕಂಡ ಕ್ರಮಗಳನ್ನು ವಹಿಸಿದೆ.**<br><br>ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ:- |

| ವರ್ಷ | ಯೋಜನೆ | ಮಂಜೂರಾದ ಶಾಲೆಗಳು | ಮಂಜೂರಾದ ಕಾಮಗಾರಿಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳು) | ಬಿಡುಗಡೆ ಮಾಡಲಾದ ಅನುದಾನ |
|---|---|---|---|---|---|
| 2021-22 | ಕೊಠಡಿ ನಿರ್ಮಾಣಕ್ಕೆ ಅನುದಾನ ಬಿಡುಗಡೆಯಾಗಿರುವುದಿಲ್ಲ | | | | |
| 2022-23 | ವಿವೇಕ | 4785 | 6601 | 94393.90 | 46901.84 |
| 2023-24 | ವಿವೇಕ | | | | 16960.61 |
| 2023-24 | CM | 547 | 710 | 8808.00 | 4301.26 |

| | | | | |
|---|---|---|---|---|
| Grants | | | | |
| ಒಟ್ಟು | 5332 | 7311 | 103201.90 | 68163.71 |

- 2024-25ನೇ ಸಾಲಿಗೆ ಸರ್ಕಾರಿ ಶಾಲಾ ಕೊಠಡಿಗಳ ನಿರ್ಮಾಣ ಕಾಮಗಾರಿಗಳಿಗೆ ಮುಂದುವರೆದ ಯೋಜನೆಗೆ ರೂ.23039.49 ಲಕ್ಷಗಳು ಮತ್ತು ಹೊಸ ಯೋಜನೆಗೆ ರೂ.11546.41 ಲಕ್ಷಗಳು ಸೇರಿ ಒಟ್ಟು ರೂ.34585.9 ಲಕ್ಷಗಳು ನಿಗದಿಯಾಗಿದ್ದು, ಈ ಕುರಿತು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

➢ **ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ:**

| ವರ್ಷ | ಶಾಲೆಗಳ ಸಂಖ್ಯೆ | ಮಂಜೂರಾದ ಅನುದಾನ (ರೂ.ಲಕ್ಷಗಳು) | ಬಿಡುಗಡೆಯಾದ ಅನುದಾನ (ರೂ.ಲಕ್ಷಗಳು) |
|---|---|---|---|
| 2021-22 | 518 | 1947.00 | 1947.00 |
| 2022-23 | 1833 | 4650.00 | 4650.00 |
| 2023-24 | 2162 | 7000.00 | 7000.00 |
| Total | **4513** | **13597.00** | **13597.00** |

- 2024-25ನೇ ಸಾಲಿಗೆ ಸರ್ಕಾರಿ ಶಾಲಾ ಕೊಠಡಿಗಳ ದುರಸ್ತಿ ಕಾಮಗಾರಿಗಳಿಗೆ ಮುಂದುವರೆದ ಯೋಜನೆಗೆ ರೂ.5129.66 ಲಕ್ಷಗಳು ಹಾಗೂ ಹೊಸ ಯೋಜನೆಗೆ ರೂ.10000.00 ಲಕ್ಷಗಳು ನಿಗದಿಯಾಗಿದ್ದು, ಈ ಕುರಿತು ಅಗತ್ಯ ಕ್ರಮಕೈಗೊಳ್ಳಲಾಗುತ್ತಿದೆ.

➢ **ಸರ್ಕಾರಿ ಶಾಲೆಗಳಲ್ಲಿ ಶೌಚಾಲಯ ನಿರ್ಮಾಣ:-**

- ನರೇಗಾ ಒಗ್ಗೂಡಿಸುವಿಕೆಯ ಮೂಲಕ ರಾಜ್ಯ ವಲಯದ ಯೋಜನೆಯಡಿಯಲ್ಲಿ ಸರ್ಕಾರಿ ಶಾಲೆಗಳ ಶೌಚಾಲಯ ನಿರ್ಮಾಣಕ್ಕಾಗಿ ಈ ಕೆಳಕಂಡಂತೆ ಅನುದಾನ ಬಿಡುಗಡೆಗೊಳಿಸಲಾಗಿರುತ್ತದೆ.

( ರೂ.ಲಕ್ಷಗಳಲ್ಲಿ)

| ವರ್ಷ | ಬಿಡುಗಡೆಯಾದ ಅನುದಾನ |
|---|---|
| 2021-22 | 3500.00 |
| 2022-23 | 3500.00 |
| 2023-24 | 8000.00 |
| ಒಟ್ಟು | **15000.00** |

➢ 2024-25ನೇ ಸಾಲಿನಲ್ಲಿ ಶೌಚಾಲಯ ನಿರ್ಮಾಣಕ್ಕೆ ರೂ.12279.00 ಲಕ್ಷಗಳು ಮಂಜೂರಾಗಿದ್ದು, ಈ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.

➢ **ಕುಡಿಯುವ ನೀರು ಮತ್ತು ಶೌಚಾಲಯ ನಿರ್ವಹಣೆ:-**

(ರೂ.ಲಕ್ಷಗಳು)

| ವರ್ಷ | ಬಿಡುಗಡೆಯಾದ ಅನುದಾನ |
|---|---|
| 2021-22 | 2500.00 |
| 2022-23 | 3500.00 |
| 2023-24 | 7122.00 |

| | | ಒಟ್ಟು | 13122.00 |
|---|---|---|---|

> ➢ 2024-25ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಶಾಲೆಗಳ ಶೌಚಾಲಯ ನಿರ್ವಹಣೆ ಮತ್ತು ಇತರೆ ನಿರ್ವಹಣೆಗಾಗಿ ರೂ.5807.00 ಲಕ್ಷಗಳು ಅನುಮೋದನೆಯಾಗಿರುತ್ತದೆ ಅದರಲ್ಲಿ ರೂ 2915.00 ಲಕ್ಷಗಳು ಬಿಡುಗಡೆಯಾಗಿದ್ದು, ಈ ಕುರಿತು ಕ್ರಮ ಕೈಗೊಳ್ಳಲಾಗುತ್ತಿದೆ.

➢ ಇತರೆ ಸೌಲಭ್ಯಗಳು:-

- 2019-20ನೇ ಸಾಲಿನಲ್ಲಿ ಮಾನ್ಯ ಉಚ್ಚನ್ಯಾಯಾಲಯದ ನಿರ್ದೇಶನದಂತೆ, ಸರ್ಕಾರಿ ಶಾಲೆಗಳಲ್ಲಿ, 529 ಹೆಚ್ಚುವರಿ ಕೊಠಡಿಗಳು, 551 ಮೇಜರ್ ದುರಸ್ಥಿ ಕಾಮಗಾರಿಗಳು, 543 ಶೌಚಾಲಯಗಳು, 312 ಕುಡಿಯುವ ನೀರಿನ ಪ್ಯೂರಿಫೈಯರ್ ಹಾಗೂ 81 ಗ್ರಂಥಾಲಯಗಳನ್ನು ಒಳಗೊಂಡಂತೆ ಒಟ್ಟು 2016 ವಿವಿಧ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- 2020-21ನೇ ಸಾಲಿನಲ್ಲಿ 50 ಕೆ.ಪಿ.ಎಸ್ ಶಾಲೆಗಳನ್ನು ಹಾಗೂ ಆರ್.ಎಂ.ಎಸ್.ಎ ಯೋಜನೆಯಡಿಯಲ್ಲಿ 83 ಶಾಲೆಗಳಲ್ಲಿ ಉನ್ನತೀಕರಣ ಕಾಮಗಾರಿಗಳನ್ನು ಕೈಗೊಳ್ಳಲಾಗಿದೆ.
- 2021-22 ನೇ ಸಾಲಿನಲ್ಲಿ 50 ಕೆ.ಪಿ.ಎಸ್ ಶಾಲೆಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.
- 2022-23 ನೇ ಸಾಲಿನ ವಿಶೇಷ ಅಭಿವೃದ್ಧಿ ಯೋಜನೆಯಡಿಯಲ್ಲಿ 39 ಹೊಸ ಕೆ.ಪಿ.ಎಸ್ ಶಾಲೆಗಳು ಹಾಗೂ 88 ಕೆ.ಪಿ.ಎಸ್ ಶಾಲೆಗಳ ಉನ್ನತೀಕರಣ ಕಾಮಗಾರಿಗಳನ್ನು PWD/ PRED ವತಿಯಿಂದ ಕೈಗೊಳ್ಳಲಾಗುತ್ತಿದೆ.
- ಕೇಂದ್ರ ಪುರಸ್ಕೃತ ಯೋಜನೆಯಡಿ ಅನುಮೋದನೆಯಾದ ಆರ್.ಐ.ಡಿ.ಎಫ್ -28 ಟ್ರಾಂಚ್ ಅಡಿಯಲ್ಲಿ 40 ಶಾಲೆಗಳಲ್ಲಿ ಉನ್ನತೀಕರಣ ಕಾಮಗಾರಿಗಳನ್ನು PWD/PRED ವತಿಯಿಂದ ಕೈಗೊಳ್ಳಲಾಗುತ್ತಿದೆ.
- ರಾಜ್ಯದ ಸರ್ಕಾರಿ ಶಾಲೆಗಳಲ್ಲಿನ ಹೆಚ್ಚುವರಿ ದಾಖಲಾತಿಗೆ ಅನುಗುಣವಾಗಿ ಕೇಂದ್ರದಿಂದ ನಿಗಧಿಪಡಿಸಿರುವ 2378 ಶಾಲೆಗಳ ಪೈಕಿ ಅನುದಾನ ಲಭ್ಯತೆಯ ಮೇರೆಗೆ 222 ಶಾಲೆಗಳಲ್ಲಿ ದುರಸ್ಥಿ ಕಾಮಗಾರಿಗಳನ್ನು PRED ವತಿಯಿಂದ ಕೈಗೊಳ್ಳಲಾಗುತ್ತಿದೆ.
- 2020-21ರಿಂದ 2022-23ರ ವರೆಗಿನ ಕೇಂದ್ರ ಪುರಸ್ಕೃತ ಯೋಜನೆಯಡಿ ಅನುಮೋದನೆಯಗಿರುವ 67 ದುರಸ್ಥಿ ಕಾಮಗಾರಿಗಳು, 32 ಬಲವರ್ಧನೆ ಕಾಮಗಾರಿಗಳು ಹಾಗೂ 06 ಶಾಲೆಗಳಲ್ಲಿ ಉನ್ನತೀಕರಣ ಕಾಮಗಾರಿಗಳನ್ನು ಒಳಗೊಂಡಂತೆ ಒಟ್ಟಾರೆ 105 ಕಾಮಗಾರಿಗಳನ್ನು PWD/PRED ವತಿಯಿಂದ ಕೈಗೊಳ್ಳಲಾಗುತ್ತಿದೆ.

| | | |
|---|---|---|
| | | • 2023-24 ನೇ ಸಾಲಿನ ಕೇಂದ್ರ ಪುರಸ್ಕೃತ ಯೋಜನೆಯಡಿ ಅನುಮೋದನೆಯಾದ 08 ಹೊಸ ಶಾಲಾ ಕಟ್ಟಡಗಳ ನಿರ್ಮಾಣ, 06 ಪ್ರೌಢ ಶಾಲಾಗಳ ನಿರ್ಮಾಣ, 97 CWSN ಶೌಚಾಲಯಗಳ ನಿರ್ಮಾಣ, 03 ಇಂಗು ಗುಂಡಿಗಳ ನಿರ್ಮಾಣ ಹಾಗೂ 05 ಕೆ.ಜಿ.ಬಿ.ವಿ ಹಾಸ್ಟೆಲ್‌ಗಳ ನಿರ್ಮಾಣಗಳನು ಒಳಗೊಂಡಂತೆ ಒಟ್ಟಾರೆ 119 ವಿವಿಧ ಕಾಮಗಾರಿಗಳನ್ನು PWD/PRED ವತಿಯಿಂದ ಕೈಗೊಳ್ಳಲಾಗುತ್ತಿದೆ.<br>• 2023-24 ನೇ ಸಾಲಿನಲ್ಲಿ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿ ಕೆ.ಪಿ.ಎಸ್ ಶಾಲೆಗಳಲ್ಲದ 22 ಶಾಲೆಗಳಲ್ಲಿ ಹೊಸದಾಗಿ ಕೆ.ಪಿ.ಎಸ್ ಶಾಲೆಗಳನ್ನು ಗುರುತಿಸಿ ಅಗತ್ಯ ಮೂಲಭೂತ ಸೌಕರ್ಯಗಳನ್ನು ಒದಗಿಸುವುದು ಹಾಗೂ 46 ಹಾಲಿ ಇರುವ ಕೆ.ಪಿ.ಎಸ್ ಶಾಲೆಗಳಿಗೆ ಮೂಲಭೂತ ಸೌಕರ್ಯಗಳನ್ನು ಒದಗಿಸಲು PWD/PRED ವತಿಯಿಂದ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.<br>• 2023-24ನೇ ಸಾಲಿನಲ್ಲಿ ಮಹತ್ವಾಕಾಂಕ್ಷಿ ತಾಲ್ಲೂಕುಗಳಲ್ಲಿನ ಕೆ.ಜಿ.ಬಿ.ವಿ ವಸತಿ ನಿಲಯಗಳಲ್ಲಿ ದಾಖಲಾತಿಗೆ ಅನುಗುಣವಾಗಿ ಹೆಚ್ಚುವರಿಯಾಗಿ Dormitory ನಿರ್ಮಾಣ ಹಾಗೂ ಹಾಲಿ ಇರುವ ಟೈಪ್-1 ಮತ್ತು ಟೈಪ್-4 ವಸತಿ ನಿಲಯಗಳ ದುರಸ್ಥಿ ಕಾಮಗಾರಿಗಳನ್ನು PWD/PRED ವತಿಯಿಂದ ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ.<br>• 2023-24 ನೇ ಸಾಲಿನ ಕೇಂದ್ರ ಪುರಸ್ಕೃತ ಪಿಎಂಶ್ರೀ ಯೋಜನೆಯಡಿ 129 ಶಾಲೆಗಳಲ್ಲಿ ಮೂಲಭೂತ ಸೌಕರ್ಯ, ಕುಡಿಯುವ ನೀರಿನ ಸೌಲಭ್ಯ, ವಿದ್ಯುತ್ತೀಕರಣ, ಪ್ರಯೋಗಾಲಯ ನಿರ್ಮಾಣ, ಹಾಗೂ ಸೋಲಾರ್ ಸೌಲಭ್ಯ ಅಳವಡಿಸುವ ಕಾಮಗಾರಿಗಳನ್ನು ಕೈಗೊಳ್ಳಲು ಕ್ರಮ ವಹಿಸಲಾಗುತ್ತಿದೆ. |
| ಆ) | ಸದರಿ ಶಾಲೆಗಳಲ್ಲಿ ಶಿಕ್ಷಕರ ಹಾಗೂ ಪೀಠೋಪಕರಣಗಳ ಸಮಸ್ಯೆ ಇದ್ದು ಇವುಗಳ ನಿವಾರಣೆಗೆ ಸರ್ಕಾರ ಕೈಗೊಳ್ಳುವ ಕ್ರಮವೇನು; | **ಶಿಕ್ಷಕರ ಕೊರತೆಯನ್ನು ನೀಗಿಸಲು ಕೈಗೊಂಡಿರುವ ಕ್ರಮಗಳು**<br>• 2022-23ನೇ ಸಾಲಿನಲ್ಲಿ ರಾಜ್ಯದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಗಳಲ್ಲಿ ಖಾಲಿ ಇದ್ದ ಪದವೀಧರ ಪ್ರಾಥಮಿಕ ಶಿಕ್ಷಕರು (6 ರಿಂದ 8 ನೇ ತರಗತಿ) ವೃಂದದ 15000 ಹುದ್ದೆಗಳ ಭರ್ತಿಗೆ ದಿನಾಂಕ: 21.03.2022 ರಂದು ಅಧಿಸೂಚಿಸಲಾಗಿತ್ತು. ಈ ಹುದ್ದೆಗಳಿಗೆ ಎದುರಾಗಿ 13352 ಅಭ್ಯರ್ಥಿಗಳು ಅರ್ಹರಾಗಿದ್ದು, ಈ ಪೈಕಿ 12429 ಅಭ್ಯರ್ಥಿಗಳು ಕೌನ್ಸಿಲಿಂಗ್ ಹಾಜರಾಗಿ ಸ್ಥಳ ಆಯ್ಕೆ ಮಾಡಿಕೊಂಡಿರುತ್ತಾರೆ ಮತ್ತು 11494 ಅಭ್ಯರ್ಥಿಗಳು ಈಗಾಗಲೇ ಶಾಲಾ ಕರ್ತವ್ಯಕ್ಕೆ ಹಾಜರಾಗಿರುತ್ತಾರೆ. ಪ್ರಕರಣ ಭಾರತ ಸರ್ವೋಚ್ಚ ನ್ಯಾಯಾಲಯದಲ್ಲಿರುವುದರಿಂದ ಉಳಿದ ಅಭ್ಯರ್ಥಿಗಳ |

| | | |
|---|---|---|
| | | ನೇಮಕಾತಿಗೆ ನ್ಯಾಯಾಲಯದ ಅಂತಿಮ ತೀರ್ಪಿನ ನಂತರ ನಿಯಮಾನುಸಾರ ಕ್ರಮವಹಿಸಲಾಗುವುದು.<br>• ಈ ಮೇಲಿನ ಕ್ರಮಗಳ ನಂತರ ಉಳಿದಿರುವ ರಾಜ್ಯದಲ್ಲಿ ಸರ್ಕಾರಿ ಪ್ರಾಥಮಿಕ ಖಾಲಿ ಬೋಧಕ ಹುದ್ದೆಗಳ ಎದುರಾಗಿ ವಿದ್ಯಾರ್ಥಿಗಳ ಶೈಕ್ಷಣಿಕ ಹಿತದೃಷ್ಟಿಯಿಂದ ಪ್ರತಿ ವರ್ಷದಂತೆ ಪ್ರಸ್ತುತ ಸಾಲಿನಲ್ಲಿಯೂ ಶೈಕ್ಷಣಿಕ ವರ್ಷದ ಅಂತ್ಯದವರೆಗೆ ತಾತ್ಕಾಲಿಕವಾಗಿ ಒಟ್ಟು-33863 ಅತಿಥಿ ಶಿಕ್ಷಕರುಗಳನ್ನು ನೇಮಕ ಮಾಡಿಕೊಂಡು ಶಿಕ್ಷಕರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.<br>• ಸರ್ಕಾರಿ ಪ್ರಾಥಮಿಕ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡುವ ಕುರಿತು ಈ ಕಛೇರಿ ಪತ್ರ ಸಂಖ್ಯೆ :ಸಿ4(1)ಸ.ಪ್ರಾ.ಶಾ.ಶಿ.ನೇ/46/2021-22/9-1407683 ಪತ್ರ ದಿನಾಂಕ: 22.05.2024ರಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶವು ಸೇರಿದಂತೆ ಪ್ರಾಥಮಿಕ ಶಾಲೆಗಳಿಗೆ 7500 ಹುದ್ದೆಗಳನ್ನು ಮತ್ತು ಪ್ರೌಢ ಶಾಲೆಗಳಿಗೆ 2500 ಹುದ್ದೆಗಳ ನೇಮಕಾತಿಗೆ ಪ್ರಸ್ತಾಪಿಸಿ ಈಗಾಗಲೇ ಆರ್ಥಿಕ ಇಲಾಖೆಯ ಅನುಮೋದನೆಗೆ ಸಲ್ಲಿಸಲಾಗಿದೆ.<br>• **ಪೀಠೋಪಕರಣಗಳ ಕೊರತೆಯನ್ನು ನೀಗಿಸಲು ಕೈಗೊಂಡಿರುವ ಕ್ರಮಗಳು**<br>• 2021-22 ಮತ್ತು 2022-23ನೇ ಸಾಲಿಗೆ ರಾಜ್ಯದ ಸರ್ಕಾರಿ ಶಾಲೆಗಳಿಗೆ ಅಗತ್ಯತೆಗನುಗುಣವಾಗಿ ಪೀಠೋಪಕರಣ ಒದಗಿಸಲು ರೂ. 7000.00 ಲಕ್ಷಗಳ ಅನುದಾನ ಮಂಜೂರಾಗಿದ್ದು, ಜಿಲ್ಲಾ ಹಂತದಲ್ಲಿ ಖರೀದಿ ಪ್ರಕ್ರಿಯೆ ಜಾರಿಯಲ್ಲಿರುತ್ತದೆ.<br>• ಕೇಂದ್ರ ಪುರಸ್ಕೃತ ಯೋಜನೆಯಾದ ಸಮಗ್ರ ಶಿಕ್ಷಣ ಕರ್ನಾಟಕ ಯೋಜನೆಯಡಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳ ಹಾಜರಾತಿಗೆ ಅನುಗುಣವಾಗಿ ಹಾಗೂ ಅವಶ್ಯಕತೆಯನ್ನು ಆಧರಿಸಿ ಕೊಠಡಿಗಳನ್ನು ಪೀಠೋಪಕರಣಗಳೊಂದಿಗೆ ನಿರ್ಮಿಸಲಾಗುತ್ತಿದೆ.<br>• ಅದರಂತೆ ಸಮಗ್ರ ಶಿಕ್ಷಣ-ಕರ್ನಾಟಕ ಯೋಜನೆಯಡಿ 2022-23ನೇ ಸಾಲಿನಲ್ಲಿ ವಾರ್ಷಿಕ ಕ್ರಿಯಾ ಯೋಜನೆಯಲ್ಲಿ ಅನುಮೋದಿತ 12 ಶಾಲೆಗಳಲ್ಲಿ, 44 ಕೊಠಡಿಗಳನ್ನು ಪೀಠೋಪಕರಣಗಳೊಂದಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ನಿರ್ಮಾಣಗೊಳಿಸಲು ಕ್ರಮ ವಹಿಸಲಾಗಿದೆ.<br>• ರಾಜ್ಯ ವಲಯದ ಅನುದಾನದೊಂದಿಗೆ 2020-21 ಹಾಗೂ 2021-22ರ ಸಾಲಿನಲ್ಲಿ ರಾಜ್ಯಾದ್ಯಂತ ತಲಾ 50 ಕೆಪಿಎಸ್ ಶಾಲೆಗಳಲ್ಲಿ 550 |

| | | |
|---|---|---|
| | | ಕೊಠಡಿಗಳನ್ನು ಪೀಠೋಪಕರಣಗಳೊಂದಿಗೆ ಒಟ್ಟಾರೆ 100 ಶಾಲೆಗಳಲ್ಲಿ, 1100 ಕೊಠಡಿಗಳನ್ನು ಪೀಠೋಪಕರಣದೊಂದಿಗೆ ಲೋಕೋಪಯೋಗಿ ಇಲಾಖೆ ವತಿಯಿಂದ ನಿರ್ಮಾಣಗೊಳಿಸಲು ಕ್ರಮವಹಿಸಲಾಗಿದೆ.<br>• 2022–23ರ ಸಾಲಿನಲ್ಲಿ 112 ಕೆಪಿಎಸ್ ಶಾಲೆಗಳಲ್ಲಿ 581 ಕೊಠಡಿಗಳನ್ನು ಪೀಠೋಪಕರಣದೊಂದಿಗೆ ಲೋಕೋಪಯೋಗಿ ಇಲಾಖೆ/ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ ವತಿಯಿಂದ ನಿರ್ಮಾಣಗೊಳಿಸಲು ಕ್ರಮವಹಿಸಲಾಗಿದೆ. |
| ಇ) | ಕಡಿಮೆ ವಿದ್ಯಾರ್ಥಿಗಳು ಇರುವ ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ಪಕ್ಕದ ಗ್ರಾಮದ ಶಾಲೆಗಳಿಗೆ ಮಕ್ಕಳನ್ನು ವರ್ಗಾಹಿಸುವ ಯೋಜನೆ ಸರ್ಕಾರದ ಮುಂದಿದೆಯೇ; | ಕಡಿಮೆ ವಿದ್ಯಾರ್ಥಿಗಳು ಇರುವ ಪ್ರಾಥಮಿಕ ಶಾಲೆಗಳನ್ನು ಮುಚ್ಚಿ ಪಕ್ಕದ ಗ್ರಾಮದ ಶಾಲೆಗಳಿಗೆ ಮಕ್ಕಳನ್ನು ವರ್ಗಾಹಿಸುವಂತಹ ಯೋಜನೆ ಸರ್ಕಾರದ ಮುಂದೆ ಇರುವುದಿಲ್ಲ. |
| ಈ) | ಇದ್ದಲ್ಲಿ. ಇದರಿಂದ ಹಳ್ಳಿಯ ಬಡ ರೈತಾಪಿ ಮಕ್ಕಳಿಗೆ ತೊಂದರೆಯಾಗಿ ವಿದ್ಯಾಭ್ಯಾಸದಿಂದಲೇ ವಂಚಿತರಾಗಿರುವುದರಿಂದ ಸದರಿ ಶಾಲೆಗಳನ್ನು ಇದ್ದ ಸ್ಥಳದಲ್ಲೇ ಮುಂದುವರೆಸಲು ಸರ್ಕಾರ ಕ್ರಮ ಕೈಗೊಳ್ಳುವುದೇ? (ಪೂರ್ಣ ಮಾಹಿತಿ ಒದಗಿಸುವುದು) | ಮೇಲಿನ ಉತ್ತರದಿಂದಾಗಿ ಪ್ರಶ್ನೆ ಅನ್ವಯಿಸುವುದಿಲ್ಲ. |

ಇಪಿ 77 ಎಂಪಿಇ 2023

(ಎಸ್.ಮಧುಬಂಗಾರಪ್ಪ)

ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು